ಪ್ರಕಟಣೆ

ಉಪಾಧ್ಯಕ್ಷರು : ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯ ಸ್ಥಾನಕ್ಕೆ ಭರ್ತಿ ಮಾಡಬೇಕಾದ ಸ್ಥಾನಗಳ ಸಂಖ್ಯೆಗೆ ಸಮಾನವಾಗಿ ನಾಮಪತ್ರಗಳು ಬಂದಿರುವುದರಿಂದ ವಿಧಾನ ಸಭೆಯಿಂದ ಮಂಗಳೂರು ವಿಶ್ವವಿದ್ಯಾನಿಲಯದ ಸೆನಟ್‌ಗೆ ಈ ಕೆಳಕಂಡ ಸದಸ್ಯರುಗಳು ಚುನಾಯಿತರಾಗಿರುತ್ತಾರೆಂದು ಘೋಷಿಸುತ್ತೇನೆ.

1. ಶ್ರೀ ಕೆ. ಅಮರನಾಥಶೆಟ್ಟಿ
2. ಶ್ರೀ ಹೆಚ್.ಎನ್. ಪ್ರಕಾಶ್
3. ಶ್ರೀ ವಸಂತ ವಿ. ಸಾಲಿಯಾನ
4. ಶ್ರೀ ಎಸ್.ಎಂ. ನಾಗರಾಜ್
5. ಶ್ರೀ ಕೆ. ಜಯರಾಮ್ ಶೆಟ್ಟಿ

ಅಧ್ಯಕ್ಷರ ಅಪ್ಪಣೆ ಮೇರೆಗೆ

ಮೈಸೂರು ನಗರದಲ್ಲಿ ಪಡಿತರ ಚೀಟಿ ನವೀಕರಿಸಲು ಜನತೆಗೆ ಆಗುತ್ತಿರುವ ತೊಂದರೆ ಬಗ್ಗೆ

ಶ್ರೀ ಹೆಚ್.ಸಿ. ಶಂಕರಲಿಂಗೇಗೌಡ : (ಚಾಮರಾಜ) ಮಾನ್ಯ ಉಪಾಧ್ಯಕ್ಷರೆ, ಪಡಿತರ ಚೀಟಿಯನ್ನು ನವೀಕರಿಸುವಲ್ಲಿ ಬಹಳ ಜನರಿಗೆ ಅನಾನುಕೂಲವಾಗಿದೆ. ಆಯಾಯ ಸೊಸೈಟಿಗಳಲ್ಲೇ ನವೀಕರಿಸಿದ್ದರೆ ಅನುಕೂಲವಾಗುತ್ತಿತ್ತು. ಜನರು ಬೆಳಿಗ್ಗೆ ಕೂಲಿ ಮಾಡಿಕೊಂಡು ಬಂದು ಸಂಜೆ ಪಡಿತರ ಚೀಟಿಯನ್ನು ನವೀಕರಿಸಿಕೊಂಡು ಹೋಗುತ್ತಿದ್ದರು. ಆದರೆ ಮೈಸೂರು ನಗರದಲ್ಲಿ ಪಡಿತರ ಚೀಟಿ ನವೀಕರಿಸಲು ನೂಕುನುಗ್ಗಲಾಗಿ, ಹೊಡೆದಾಟವಾಗಿ ಪರಿಸ್ಥಿತಿ ವಿಕೋಪಕ್ಕೆ ಹೋಗುವ ರೀತಿಯಲ್ಲಿ ಆಯಿತು. ದಯಮಾಡಿ ಸರಿಯಾದ ವ್ಯವಸ್ಥೆಯಲ್ಲಿ ಪಡಿತರ ಚೀಟಿ, ಸೀಮೆ ಎಣ್ಣೆ ಚೀಟಿಗಳನ್ನು ನವೀಕರಿಸಿಕೊಡಬೇಕು. ನಮ್ಮ ಮಂತ್ರಿ ಮಹೋದಯರ ಕಾರಿಗೆ ಬೆಲೆ ಇರುತ್ತದೆ. ಅದರಲ್ಲಿ ಕೆಂಪು ಲೈಟು ಇದ್ದಾಗ ಜನರು ಗೌರವವನ್ನು ಕೊಡುತ್ತಾರೆ. ಆದರೆ ಮಂತ್ರಿಮಹೋದಯರ ಕಾರು ಇಂದು ಜೂಜುತಾಣಗಳಾಗಿದ್ದಾವೆ. ಡ್ರೈವರ್‌ಗಳು ಸಿಗರೇಟು ಸೇದಿಕೊಂಡು ಮಂತ್ರಿಗಳ ಕಾರಿನಲ್ಲಿ, ಐಎಎಸ್ ಅಧಿಕಾರಿಗಳ ಕಾರಿನಲ್ಲಿ ಕುಳಿತಿರುತ್ತಾರೆ. ಹೀಗಾದರೆ ಮಂತ್ರಿಗಳ ಕಾರಿಗೆ ಇರತಕ್ಕ ಸ್ಯಾಂಟಿಟಿಯಾದರೂ ಸಹ ಏನು? ಅದೆಲ್ಲಾ ಹೋಗಿಬಿಡುತ್ತಿದೆ. ದಯಮಾಡಿ ಚಾಲಕರಿಗೆ ಬುದ್ದಿ ಹೇಳುವ ಮೂಲಕ ಇದನ್ನು ತಪ್ಪಿಸಬೇಕೆಂದು ಕಳಕಳಿಯಿಂದ ಹೇಳುತ್ತಿದ್ದೇನೆ. ಮಂತ್ರಿಗಳ ಮತ್ತು ಅಧಿಕಾರಿಗಳ ದೃಷ್ಟಿಯಿಂದಲೂ ಇದನ್ನು ಹೇಳುತ್ತಿದ್ದೇನೆ. ದಯಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಿ.

1.50 ಪಿ.ಎಂ

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಖಾತೆ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೆ, ಸೀಮೆ ಎಣ್ಣೆ ವಿತರಣೆಯಲ್ಲಿ ಆಗತಕ್ಕಂತಹ ಲೋಪ ದೋಷಗಳನ್ನು ಸರಿಪಡಿಸುವುದಕ್ಕೋಸರ

ಕೂಪನ್ ಪದ್ಧತಿಯನ್ನು ಜನವರಿ ಒಂದರಿಂದ ಜಾರಿಗೆ ತಂದಿದ್ದೇವೆ. ಇದರಿಂದ ಈ ಅವ್ಯವಹಾರ, ಕಾಳಸಂತೆ ಆಗುವುದು ತಪ್ಪಿ ಹೋಗಿ ಕಾರ್ಡುದಾರರಿಗೆ ಸಿಗುವ ಪ್ರಮಾಣದಲ್ಲಿ ಸೀಮೆ ಎಣ್ಣೆ ಸಿಕ್ಕು ಬಳಕೆದಾರರು ಸಂತೋಷವಾಗಿದ್ದಾರೆ. ನ್ಯಾಯ ಬೆಲೆ ಅಂಗಡಿಯವರಿಂದ ಪ್ರತಿಭಟನೆ ಬರುತ್ತದೆ. ಅವರಲ್ಲಿ ಸಾಕಷ್ಟು ಬೋಗಸ್ ಕಾರ್ಡ್ ಇತ್ತು, ಅದನ್ನು ಕಾಳಸಂತೆಯಲ್ಲಿ ಮಾರಿ ಲಾಭ ಮಾಡಿಕೊಳ್ಳುತ್ತಿದ್ದರು. ಅದನ್ನು ಕರ್ಟೈಲ್ ಮಾಡಿ ಕೂಪನ್ ಸಿಸ್ಟಮ್ ಇಂಟ್ರಡ್ಯೂಸ್ ಮಾಡಿದ್ದರಿಂದ ವಿತರಣಾ ವ್ಯವಸ್ಥೆ ಪರಿಪಕ್ವವಾಗಿದೆ.

ಉಪಾಧ್ಯಕ್ಷರು : ಮಂತ್ರಿಗಳ ಕಾರುಗಳ ಮೇಲೆ ಕೆಂಪು ಲೈಟ್ ಇರುವ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಆರ್. ರೋಷನ್ ಬೇಗ್ : ಇದನ್ನು ವಿಚಾರಿಸಿ ಹೇಳುತ್ತೇನೆ.

ಕುಣಿಗಲ್ ವಿಧಾನ ಸಭಾ ಕ್ಷೇತ್ರದಲ್ಲಿ ಹೇಮಾವತಿ ನಾಲಾ ಕಾಮಗಾರಿ ಬಗ್ಗೆ

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಸನ್ಮಾನ್ಯ ಉಪಸಭಾಧ್ಯಕ್ಷರೆ, ಮಾನ್ಯ ಭಾರೀ ನೀರಾವರಿ ಸಚಿವರ ಗಮನ ಸೆಳೆಯುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿ ಹೇಮಾವತಿ ನಾಲೆ ಕಾಮಗಾರಿ ನಡೆಯುತ್ತಿದೆ. ಸುಮಾರು 60 ಕಿ.ಮಿ. ನಷ್ಟು ಮುಖ್ಯ ಕಾಲುವೆ ನನ್ನ ಕ್ಷೇತ್ರದಲ್ಲಿ ಹರಿಯುತ್ತಿದೆ. ದುರಾದೃಷ್ಟವಶಾತ್ 2,000 ಎಕರೆಯಷ್ಟು ಜಮೀನು ಮಾತ್ರ ನನ್ನ ಕ್ಷೇತ್ರದಲ್ಲಿ ನೀರಾವರಿಯಾಗುತ್ತಿದೆ. ನಾಲೆ ನನ್ನ ಕ್ಷೇತ್ರದಲ್ಲಿ ಹರಿದರೂ ಕೂಡ ನೀರಾವರಿ ಬೇರೆ ತಾಲ್ಲೂಕಿಗೆ ಹೋಗುತ್ತದೆ. ಸಂತೋಷ. ತುಮಕೂರು ತಾಲ್ಲೂಕಿನಲ್ಲಿ ಹೆಗ್ಗೂರು ಮತ್ತು ಗೋಳೂರುವರೆಗೆ ಬಹಳ ಪ್ರಮುಖವಾದ ಹೋಬಳಿಗಳು ನನ್ನ ಕ್ಷೇತ್ರದಲ್ಲಿ ಅಲ್ಲಿ ಸುಮಾರು 30ರಿಂದ 35 ಕಿ.ಮಿ. ನಷ್ಟು ನಾಲೆ ಆ ಹೋಬಳಿಯಲ್ಲಿ ಹೋಗುತ್ತದೆ. ಆದರೆ ದುರಾದೃಷ್ಟವಶಾತ್ ಆ ಹೋಬಳಿಗೆ ನೀರಾವರಿ ಸೌಲಭ್ಯ ಇಲ್ಲ. ಅತಿ ಆಳದಲ್ಲಿ ನಾಲೆ ಹೋಗುತ್ತದೆ, ಅಲ್ಲಿ ನೀರಾವರಿ ಸೌಲಭ್ಯ ಕಲ್ಪಿಸುವುದಕ್ಕೆ ಆಗಲಿಲ್ಲ. ಆದ್ದರಿಂದ ಸುಮಾರು ವರ್ಷಗಳಿಂದ ಈ ಹೋಬಳಿಗೆ ಸೇರಿದ ಜನಗಳು ನಾಗವಲ್ಲಿ, ಹೆಬ್ಬೂರು ಮತ್ತು ಗೂಳೂರು ಈ ಪ್ರಮುಖ ಕೆರೆಗಳಿಗೆ ಏತ ನೀರಾವರಿ ಮೂಲಕ ನೀರನ್ನು ಒದಗಿಸಬೇಕೆಂದು ಮನವಿ ಮಾಡುತ್ತಾ ಬಂದಿದ್ದೇನೆ, ತಮ್ಮ ಗಮನಕ್ಕೂ ಬಂದಿದೆ. ನಾಲೆ ಹರಿದು ನೀರು ಬಾರದೆ ಇರತಕ್ಕಂತಹ ಭಾಗದಲ್ಲಿ ರೈತರು ಅನೇಕ ವರ್ಷಗಳಿಂದ ನಾಗವಲ್ಲಿ ಈ ಬಗ್ಗೆ ಸರ್ಕಾರ ತಾವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಯಾವಾಗ ಈ ಕ್ರಮ ಕೈಗೊಳ್ಳುತ್ತೀರಿ ಈ ಬಗ್ಗೆ ದಯಮಾಡಿ ಮಾನ್ಯ ಸಚಿವರು ವರದಿ ಕೊಡಬೇಕು.

ಶ್ರೀ ಕೆ.ಎನ್. ನಾಗೇಗೌಡ (ಭಾರೀ ನೀರಾವರಿ ಖಾತೆ ಸಚಿವರು) : ಹೇಮಾವತಿ ಮುಖ್ಯ ಕಾಲುವೆಯಿಂದ ನಾಗವಲ್ಲಿ, ಹೆಬ್ಬೂರು ಮತ್ತು ಗೂಳೂರು ಕೆರೆಗಳಿಗೆ ಲಿಫ್ಟ್ ಇರಿಗೇಷನ್ ಮಾಡಿ ಕೊಡಬೇಕೆಂದು ಕೇಳುತ್ತಾರೆ, ಇದು ಆಗುವುದಿಲ್ಲ. ನಾವು ಮೇನ್ ಕೆನಾಲ್ ಫ್ಲೋ ಇರಿಗೇಷನನ್ನು ಕೋಟ್ಯಾಂತರ ರೂಪಾಯಿ ಹಣ ವೆಚ್ಚ ಮಾಡಿ ನಾಲೆ ತೆಗೆದು ಅಲ್ಲಿಂದ ಕೆನಾಲ್ ನಿಂದ ಲಿಫ್ಟ್ ಮಾಡಿ ಕೆರೆ ಕೊಡತಕ್ಕಂಥದ್ದು ಸಾಧ್ಯವಾಗುವುದಿಲ್ಲ. ಇದಕ್ಕೆ ಯಾವುದಾದರೂ ಬೇರೆ ಮಾರ್ಗ ಹುಡಕಬೇಕೇ ವಿನಃ ಲಿಫ್ಟ್ ಇರಿಗೇಷನ್ ಈ ಕೆರೆಗಳಿಗೆ ಇಲ್ಲವೆಂದು ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.